ಸರಿಯಾದ ಹೆಸರನ್ನೆ ಇಟ್ಟಿದ್ದೀಯ ಬಿಡು ಕರಿಯನುಮಪ್ಪಣ್ಣ. ಅದೆಂಥ ಗಟ್ಟಿ ಹಲ್ಲು ಅವ್ನೋವು. ಎಂಥ ಎಮ್ಮೆಗಳನ್ನಾದರೂ ಕಟಕಟ ಕಡಿದು ಪುಡಿಪುಡಿ ಮಾಡಿ ನುಂಗ್ ಬಿಡ್ತಾನೆ' ಎಂದು ತಮಾಷೆ ಮಾಡಿದಾಗ ಕರಿಯನುಮಪ್ಪ ಕುಗ್ಗಿ ಹೋಗುತ್ತಿದ್ದ. ಮಗನು ಕೂಡ ಎಷ್ಟೋ ಸಾರಿ 'ನೀನು ಸ್ವಾತಂತ್ರ್ಯ ಹೋರಾಟಗಾರನಾಗಿದ್ದು ಹೊಳೇಲಿ ಹುಣ್ಸೆ ಹುಳಿ ಹಿಂಡ್ದಂಗಾಯ್ತು. ಆವಾಗ್ಲೆ ನೀನು ರಾಜಕೀಯಕ್ಕೆ ಇಳಿದಿದ್ರೆ ಎಂ.ಎಲ್.ಎ ನೋ, ಮಂತ್ರಿನೋ ಆಗಿರ್‍ತಿದ್ದೆ. ಕೆಲ್ಸಕ್ಕೆ ಬರ್‍ದೋರೆಲ್ಲ ಇವೊತ್ತು ರಾಜ್ಕೀಯ್ದಾಗೆ ಮೆರಿತಾ ಬಿದ್ದವ್ರೆ. ನಾನು ಅಂತೋರ್ ಚಾಕ್ರಿ ಮಾಡ್ಕಂಡ್ ಬಿದ್ದಿರೋ ಗತಿ ಬರೋಕೆ ನೀನೆ ಕಾರಣ...' ಎಂದು ಹಿಯ್ಯಾಳಿಸುತ್ತಿದ್ದ.

ನಾಯಿಗಳು ಬೊಗಳುವುದರೊಂದಿಗೆ ಕರಿಯನುಮಪ್ಪ ನೆನಪುಗಳ ಕೊಂಡಿಯನ್ನು ಕಳಚಿಕೊಂಡು ವಾಸ್ತವಕ್ಕೆ ಬಂದಿದ್ದ. ಬಾಯಾರಿಕೆ ಕಡಿಮೆಯಾಗಿರಲಿಲ್ಲ. ಹಿಂದಿನ ಸಮೃದ್ಧವಾದ ಮಳೆ ಬೆಳೆಗಳು ನೆನಪಾಗಿ ಹೊಟ್ಟೆಯಲ್ಲಿ ಸಣ್ಣದಾಗಿ ಸಂಕಟ ಶುರುವಾಗಿತ್ತು. ಬೀದಿಯಲ್ಲಿ ಆಗೀಗ ಯಾರೋ ಓಡಾಡಿದಂತೆ ಅನ್ನಿಸುತ್ತಿತ್ತು. ಸ್ನಾನ ಮಾಡಿ ಹತ್ತಿರ ಹತ್ತಿರ ಹದಿನೈದು ದಿನಗಳೇ ಕಳೆದಿದ್ದವು. ಬಟ್ಟೆ ಕೂಡ ಬದಲಾಯಿಸಿರಲಿಲ್ಲ. ದನಕರುಗಳಿಗೂ ನೀರಿಲ್ಲದಂತಾಗಿ ಜನ ಬಂದಷ್ಟು ಬೆಲೆಗೆ ಅವನ್ನು ಮಾರತೊಡಗಿದ್ದರು. ತಾಲ್ಲೂಕು ಪಂಚಾಯ್ತಿಯವರು ದೂರದ ಊರುಗಳಿಂದ ಟ್ಯಾಂಕರ್‌ಗಳಲ್ಲಿ ನೀರನ್ನು ತರಿಸಿ ಜನರಿಗೆ ಹಂಚುತ್ತಿದ್ದರು. ಕರಿಯನುಮಪ್ಪ ಕಣ್ಮುಚ್ಚಿ ಮನೆದೇವರಾದ ಜಿಲ್ಲಡಗುಂಟೆ ಆಂಜನೇಯನನ್ನು ಧ್ಯಾನಿಸುತ್ತಾ ನಿದ್ದೆಗೆ ಜಾರಲು ಪ್ರಯತ್ನಿಸುತ್ತಿರುವಾಗ ಕೈ ಕಾಲು ಬೆರಳುಗಳ ಸಂದುಗಳಲ್ಲಿ ತುರಿಕೆ ಪ್ರಾರಂಭವಾಗಿತ್ತು. ಕರಿಯನುಮಪ್ಪ ತುರಿಕೆ ಕಾಣಿಸಿಕೊಂಡ ಜಾಗದಲ್ಲೆಲ್ಲ ಕೆರೆದುಕೊಂಡಿದ್ದ. ಕೆರೆದುಕೊಂಡಂತೆಲ್ಲ ತುರಿಕೆ ಇಮ್ಮಡಿಯಾಗತೊಡಗಿ ಪರಪರ ಕೆರೆದುಕೊಳ್ಳತೊಡಗಿದ್ದ. ಕೆರೆದುಕೊಂಡ ಜಾಗದಲ್ಲೆಲ್ಲ ದದ್ದುಗಳು ಎದ್ದೇಳತೊಡಗಿದ್ದು ಕರಿಯನುಮಪ್ಪನಿಗೆ ಸ್ಪರ್ಶ ಮಾತ್ರದಿಂದಲೇ ಅರಿವಾಗುತ್ತಿತ್ತು. ಕ್ರಮೇಣ ತುರಿಕೆ ತೊಡೆಸಂದು, ಕೊರಳು, ಕಿವಿಯ ಹಿಂಭಾಗ, ಬೆನ್ನು ಮುಂತಾದ ಶರೀರದ ಎಲ್ಲಾ ಭಾಗಗಳಲ್ಲೂ ಕಾಣಿಸಿಕೊಂಡಿತ್ತು. ಕರಿಯನುಮಪ್ಪನು ಈಗ ಮೈಯ್ಯಾದ ಮೈಯನ್ನೆಲ್ಲ ಕೆರೆದುಕೊಳ್ಳತೊಡಗಿದ್ದ. ಮೊದಮೊದಲು ತಿಗಣೆಯೋ, ಸೊಳ್ಳೆಯೋ ಕಚ್ಚಿರಬೇಕೆಂದುಕೊಂಡವನಿಗೆ ಕಡೆಗದು ಶರೀರವನ್ನೆಲ್ಲ ವ್ಯಾಪಿಸಿಕೊಂಡಾಗ ಸತ್ಯ ಅರಿವಾಗಿತ್ತು. 'ಅರೆ, ಕಜ್ಜಿ ಎದ್ಬಿಟ್ಟೈತೆ...' ಎಂದು ತನ್ನಷ್ಟಕ್ಕೆ ತಾನೇ ಗೊಣಗಿಕೊಂಡಿದ್ದ. ಕೆರೆದುಕೊಂಡಿದ್ದರಿಂದ ತುರಿಕೆ ಹತೋಟಿಗೆ ಬಂದಿತ್ತಲ್ಲದೆ ಸುಸ್ತಾದಂತಾಗಿ ಮೆಲ್ಲಗೆ ನಿದ್ದೆಗೆ ಜಾರಿದ್ದನು ಸ್ವಾತಂತ್ರ್ಯ ಹೋರಾಟಗಾರ ಕರಿಯನುಮಪ್ಪ. 'ಸಂಪೂರ್ಣ ರಾಮಾಯಣ' ನಾಟಕದಲ್ಲಿ ಪ್ರತಿಸಾರಿಯೂ ಕರಿಯನುಮಪ್ಪ ಜಟಾಯು ಪಕ್ಷಿಯ ಪಾತ್ರ ವಹಿಸುತ್ತಿದ್ದ. ಹಾಗಾಗಿ ಕರಿಯನುಮಪ್ಪನ ವಾರಿಗೆಯವರು ಅವನನ್ನು 'ಜಟಾಯು' ಎಂದೇ ಕರೆಯುತ್ತಿದ್ದರು.

ಬೆಳಿಗ್ಗೆ ಸೊಸೆ ಅನುಸೂಯಮ್ಮ ಕಾಫಿಗೆಂದು ಕೂಗಿದಾಗ ಕರಿಯನುಮಪ್ಪನಿಗೆ ಥಟ್ಟನೆ ಎಚ್ಚರವಾಗಿತ್ತು. ಹೊದ್ದಿದ್ದ ರಗ್ಗನ್ನು ಪಕ್ಕಕ್ಕೆ ಸರಿಸಿ ಕಾಫಿ ಲೋಟಕ್ಕೆ ಕೈಯ್ಯೊಡ್ಡಿದ್ದ. ಕಾಫಿ ಲೋಟವನ್ನು ಮಾವನ ಕೈಗಿಟ್ಟ ಅನುಸೂಯಮ್ಮ, 'ಇದೇನ್ಮಾವ ಶರೀರವಾದ ಶರೀರನೆಲ್ಲ ಯೀಪಾಟಿ ಕೆರ್‍ಕೊಂಡು ರಣರಂಪ ಮಾಡ್ಕಂಡಿದೀಯ. ಮೈತುಂಬಾ ಗುಳ್ಳೆ, ಬೇರೆ ಎದ್ದಂಗೈತೆ' ಎಂದು ಗಾಬರಿಯ ಉದ್ಗಾರ ತೆಗೆದಿದ್ದಳು. ಟವಲ್ಲಿನ ಸಹಾಯದಿಂದ ಕಾಫಿ ಲೋಟವನ್ನು ಬಾಯಿಗಿಟ್ಟುಕೊಂಡು ಒಂದು ಗುಟುಕು ಕಾಫಿಯನ್ನು ಗಂಟಲಿಗಿಳಿಸಿ ಕೊಂಡ ಕರಿಯನುಮಪ್ಪ 'ಕಜ್ಜಿ ಎದ್ದಂಗೈತಮ್ಮಯ್ಯ' ಎಂದಿದ್ದ. ಅನುಸೂಯಮ್ಮ ಬಗ್ಗಿ ಮಾವನ ಶರೀರವನ್ನು